ತಿಮ್ಮಪ್ಪನವ್ರು ಹೇಳಿ ಬಿಟ್ಟಿದ್ರು. ಈ ಜಯರಾಮು ತಿಮ್ಮಪ್ಪನವರಿಗೆ ಹಳೆ ಸ್ಟೂಡೆಂಟ್ ಆಗಿದ್ರು, ಈಗ ಟೌನ್‌ನಲ್ಲಿರೊ ಲೀಡಿಂಗ್ ಸಂಘದ ಜೊತೆ ಸರ್ಕೊಂಡು ಮತ್ತೆ ಅರ್ಧ ಪ್ಯಾಂಟ್ ಹಾಕ್ಕಣಕೆ ಶುರುವಾಗಿ ತಿಮ್ಮಪ್ಪನವರಿಗೇ ಬುದ್ದಿ ಹೇಳ ಮಟ್ಟುಕ್ಕೆ ಬೆಳೆದು ಬಿಟ್ಟಿದ್ದ. ತಿಮ್ಮಪ್ಪನವರು ಬೇರೆ ಇನ್ಯಾವುದೋ ಸರ್ಕಾರದವ್ರು ಮಾಡಿದ್ದಾಗ ಹೇಳಿದ್ರೆ ಜಯರಾಮನೂ ಉಪ್ಪು ಖಾರ ಸರ್ಕಂಡು ಇನ್ನು ನಚ್ಚಗಾಗಂಗೆ ಬೈಗುಳ ಬೆಳಸಿರೋನು. ಆದ್ರೆ ತಿಮ್ಮಪ್ಪನವರು ಈ ಮಾತು ಹೇಳಿರ ಸಂದರ್ಭ ಜಯರಾಮು ಬೆಂಬಲಿಸುವ ಪಕ್ಷ ಅಧಿಕಾರ ಹಿಡಿದಿರುವಾಗಲೇ ಆದುದರಿಂದ ಯಡವಟ್ಟು ಆಗೋಗಿತ್ತು. ಅವತ್ತೆ ಜಯರಾಮು ಮೇಷ್ಟ್ರು ಮೇಲೆ ಒಂದಿಷ್ಟು ವಕ್ರನೋಟ ಬೀರಿ ಹೋಗಿದ್ದ. ಇದಕ್ಕೆ ಪೂರಕವಾಗುವಂತೆ ತಿಮ್ಮಪ್ಪ ಮೇಷ್ಟ್ರು ಒಂದಿನ ಟೀ ಅಂಗಡಿತವ ಪುರುಸೊತ್ತಾಗಿ ಪೇಪರ್ ಓದುವಾಗ ಅದರಲ್ಲಿದ್ದ ಅಂಕಣವೊಂದು ಗಮನಸೆಳೆದು ಇನ್ನಿಲ್ಲದಂತೆ ಓದಿಸಿಕೊಂಡಿತ್ತು. ಇಂದಿನ ಶಿಕ್ಷಣ ವ್ಯವಸ್ಥೆಗೆ ಸಂಬಂಧಿಸಿದ್ದಾಗಿದ್ದ ಆ ಲೇಖನದಲ್ಲಿ 'ಎಳೆಯ ಕಂದಮ್ಮಗಳ ಮೇಲೆ ಜೀವ ವಿರೋಧಿ ಸಿದ್ಧಾಂತ ಹೇರೋದಾದ್ರೆ ಅಂಥ ಪಾಠಗಳನ್ನ ಓದೋದಕ್ಕಿಂತ ಸುಟ್ಟಾಕದೆ ಮೇಲು, ಇಂಥ ಅಮೇಧ್ಯ ತಿನ್ನಲು ನಮ್ಮ ಬಡ ಮಕ್ಕಳು ಸರ್ಕಾರಿ ಶಾಲೆಗೆ ಯಾಕೆ ಹೋಗಬೇಕು' ಎಂದು ಪ್ರಶ್ನಿಸಿದ್ದಾಗಿತ್ತು. ವಿಶೇಷವೆಂದರೆ ಈ ಲೇಖನ ಬರೆದವರ ಹೆಸರು ಪ್ರೊ. ತಿಮ್ಮೇಶ್ ಎಂಬುದಾಗಿತ್ತು. ಚಕಿತಗೊಂಡ ತಿಮ್ಮಪ್ಪನವರು, 'ನನಗೇ ಅನ್ವಯಿಸುವಂತಿರುವ ಲೇಖನವನ್ನು ನನ್ನ ಹೆಸರಿನವರೇ ಬರೆದಿದ್ದಾರೆ' ಎಂಬುದು ಹೃದಯ ಇನ್ನಷ್ಟು ಅರಳುವಂತೆ ಮಾಡಿತು. ಆಗಿಂದಾಗ್ಗೆ ಬದಲಾಗುವ ಪಾಠಗಳಿಂದ ಶ್ಯಾನೆ ರೋಸಿಹೋದಂತಿದ್ದ ಮೇಷ್ಟ್ರಿಗೆ ಈ ಲೇಖನ ನಾನಾ ಕಾರಣಗಳಿಂದ ಹಿಡಿಸಿ, ಇದರ ಒಂದಷ್ಟು ಪ್ರತಿಗಳನ್ನು ಜೆರಾಕ್ಸ್ ಮಾಡಿಸಿ ಮಕ್ಕಳ ಮೂಲಕ ಪೋಷಕರಿಗೆ ಹಂಚಿದ್ದರು. ಪ್ರೊಫೆಸರ್ ತಿಮ್ಮೇಶ್ ಎಂದು ಇರುವುದರಿಂದ ತಿಪ್ಪಾಪುರದ ಜನತೆ ನಮ್ಮ ಮೇಷ್ಟ್ರೆ ಬರೆದಿರಬಹುದೆಂಬುದಾಗಿ ತಪ್ಪುತಿಳಿದುಕೊಂಡರೂ ನನಗೆ ನಷ್ಟಕ್ಕಿಂತ ಲಾಭವೇ ಹೆಚ್ಚು ಎಂದು ಭಾವಿಸಿದಂತಿತ್ತು. ಜೊತೆಗೆ ಅರ್ಧವರ್ಷ ಕಳುದ್ರು ಇನ್ನು ಪುಸ್ತಕನೇ ತರಿಸಿಕೊಟ್ಟಿಲ್ಲ ಮೇಷ್ಟ್ರು ಎಂಬ ಇವರ ಮೇಲಿನ ಆರೋಪಕ್ಕೆ, 'ಇದು ವ್ಯವಸ್ಥೆಯ ಲೋಪ ಎಂಬುದನ್ನು ಊರಜನ ತಿಳಿದುಕೊಳ್ಳಲಿ' ಎಂಬುದಾಗಿತ್ತು. ಲೇಖನವನ್ನು ಓದಿದ ಕೆಲವರು ಮೇಷ್ಟ್ರ ಕಾಳಜಿಯನ್ನ ಮೆಚ್ಚಿದರಾದರೂ ಅನಂತರ ಜಯರಾಮನ ಓರಿಯಂಟೇಷನ್ನಿನಿಂದ ಅದರಲ್ಲಿ ಅಡಗಿರುವ ಅಪಾಯವನ್ನು ಮನಗಂಡು ಥೂ.. ಥೂ.. ಇಂಥ ಬೇಜವಾಬ್ದಾರಿ ಮೇಷ್ಟ್ರು ನಮ್ಮ ಧರ್ಮಕ್ಕೆ, ಸಂಸ್ಕೃತಿಗೆ ಅವಮಾನ ಮಾಡುತ್ತಿದ್ದಾರೆ. ಓದುವ ಪುಸ್ತಕ ಸುಟ್ಟಾಕಿ ಎನ್ನುವವರು ನಮ್ಮ ಮಕ್ಕಳಿಗೆ ಸನ್ಮಾರ್ಗವನ್ನು ಒದಗಿಸಲಾರರು. ಹೇಗಾದರೂ ಮಾಡಿ ಈ ಮೇಷ್ಟ್ರನ್ನ ಎತ್ತಂಗಡಿ ಮಾಡಿಸಬೇಕು ಎಂಬ ನಿಲುವಿಗೆ ಅಂತಿಮವಾಗಿ ಬಂದಿದ್ದರು.

ಹೊಸದಾಗಿ ಬಂದಿರುವ ಸಾಹೇಬ್ರ ಚೇಂಬರ್ ಮೇಲೆ ಈ ಅರ್ಜಿ ಹೋದ ತಕ್ಷಣ, ಸಾಹೇಬ್ರು ರಣ ರಣಗುಟ್ಟಿದರು. ತಾನು ಯಾರು ತನ್ನ ಅಧಿಕಾರ ಎಂಥಾದ್ದು ಎಂಬುದನ್ನು ಸಾಬೀತು ಪಡಿಸಲು ಇದೊಂದು ಅತ್ಯುತ್ತಮ ಪ್ರಕರಣ ಎಂದು ಬಗೆದು ತಕ್ಷಣವೇ ಸ್ಕೂಲ್ ಭೇಟಿ ಮಾಡಿಯೇ ಬಿಡೋಣವೆಂದು ಗಡಿಯಾರ ನೋಡಿಕೊಂಡರು. ಸಮಯ ಅದಾಗಲೆ ನಾಲ್ಕಾಗಿರೋದರಿಂದ ಹೋಗೊವಷ್ಟತ್ತಿಗೆ ಕುಡುಕು ಮೇಷ್ಟ್ರು ಸ್ಕೂಲ್ ಬಾಗಿಲು ಮುಚ್ಚಿರ್ತನೆ, ನಾಳೆ ಮೊದಲ ಭೇಟಿ ಇದೇ ಆಗ್ಲಿ ಎಂದು ಸುಮ್ಮನಾದರು.

ಸಾಹೇಬ್ರು ಈಗ ಸನಿಹವೇ ಇರುವ ಜಿಲ್ಲಾ ಕೇಂದ್ರದಿಂದ ಕರ್ತವ್ಯದ ಮೇಲೆ ದಿನವೂ ತಾಲ್ಲೋಕ್ಕು ಕೇಂದ್ರಕ್ಕೆ ಬಂದು ಹೋಗುತ್ತಿದ್ದರಾದರೂ, ಇವರ ಹುಟ್ಟೂರು ಕಳ್ಳು ಬಳ್ಳಿ ಎಲ್ಲ ಸುತ್ತಿಕೊಂಡಿರೋದು ಪಕ್ಕದ ತಾಲ್ಲೋಕ್ಕಿನ ಗಡಿ ಭಾಗದಲ್ಲೆ. ತಮ್ಮ ಬಾಲ್ಯ ಯವ್ವನವನ್ನೆಲ್ಲ ಈ ಗಡಿ ಭಾಗದ ಸಮೃದ್ಧ ದೊಡ್ಕೆರೆಯ ಪಕ್ಕದಲ್ಲೆ ಕಳೆದಿದ್ದರಿಂದ ಆ ಊರು ಕೇರಿ ಹಬ್ಬ ಹರಿದಿನಗಳ ಬಗ್ಗೆ ವಿಶೇಷ ಆಸಕ್ತಿ. ತಾವು ಉದ್ದೇಶ ಪೂರ್ವಕವಾಗಿ ಈ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲೂ ಇದೇ ಕಾರಣವಿದ್ದಂತಿತ್ತು. ಹೀಗಿರುವಾಗ ದೊಡ್ಕೆರೆ ಗ್ರಾಮದಲ್ಲಿ ಪ್ರಸಿದ್ಧ ದೊಡ್ಕೆರೆಯಮ್ಮನ ಜಾತ್ರೆಗೆ ವಾರದಿಂದಲೂ ಸಕಲ ಸಿದ್ದತೆಗಳು ನಡೆದಿದ್ದವು. ನನ್ನ ತಂಗಿ ಮಗ್ನೆ ಈಗ ಅಧಿಕಾರಿಯಾಗಿ ಬಂದವ್ನೆ, ಅವ್ನು ಈ ಸಲ ಜಾತ್ರಿಗೆ ಬಂದೆ ಬತ್ತನೆ ಅಂತ ದೊಡ್ಕೆರೆ ಪಂಚಾಯ್ತಿ ಚಯರ್‌ಮ್ಯಾನು ಸೋಮಾರ ಸಂತೆಲಿ